# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ನಿಮ್ಮ ಕೌಟುಂಬಿಕ ಜೀವನದಲ್ಲಿ ಸಣ್ಣ ಸಮಸ್ಯೆಗಳು ಎದುರಾಗಬಹುದು. ಅಹಂಕಾರವನ್ನು ದೂರವಿಡಿ. ವಾದಗಳಿಂದ ದೂರವಿರಿ. ವೃತ್ತಿಜೀವನದ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸುವಿರಿ. ಕೋರ್ಟ್ ಪ್ರಕರಣ ವಿಚಾರಣೆಗಳಿದ್ದಲ್ಲಿ ಗೆಲುವು ಸಾಧ್ಯತೆ. ಶುಭ: 12,18,23. ಅಶುಭ: 16,20,25.

**ವೃಷಭ:** ಇಷ್ಟ ಫಲ ಪ್ರಾಪ್ತಿ. ಪರದೇಶ ಪ್ರವಾಸಕ್ಕೆ ಸಿದ್ಧತೆ ನಡೆಯುವುದು. ಸರ್ಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ದೂರ ಪ್ರವಾಸಕ್ಕೆ ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದಿರಿ. ಶುಭ: 16,18,20. ಅಶುಭ: 12,11,27.





**ಮಿಥುನ:** ಗುರು– ಹಿರಿಯರ ಆಶೀರ್ವಾದ ಪಡೆದು ಮಹತ್ವದ ನಿರ್ಣಯ ತೆಗೆದುಕೊಳ್ಳುವಿರಿ. ಖನಿಜಗಳು, ಅಗ್ನಿ ಅವಘಡ ಸಾಧ್ಯತೆ.  ಹಳೆಯ ಕೋರ್ಟ್ ಕಾನೂನು ಪ್ರಕರಣಗಳು ಇದ್ದಲ್ಲಿ ಪರಿಹಾರವಾಗುತ್ತವೆ. ಕುಟುಂಬ ಸಮೇತ ಚಿಕ್ಕ ಪ್ರವಾಸ ಮಾಡುವಿರಿ. ಶುಭ: 12,19,28. ಅಶುಭ: 10,16,24.

**ಕರ್ಕ:** ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ ಸಿಗಲಿದೆ. ಸಹವರ್ತಿಗಳು ನಿಮ್ಮ ಯೋಜನೆಗಳಿಗೆ ಬೆಂಬಲ ನೀಡಲಿದ್ದಾರೆ. ಕೋರ್ಟ್ ವ್ಯವಹಾರಗಳು ನಿಮ್ಮ ಪರವಾಗಿ ಆಗುವ ಸಾಧ್ಯತೆ ಇದೆ.  ಸಹೋದ್ಯೋಗಿಗಳ ಜತೆ ಮುಖ್ಯವಾದ ಚರ್ಚೆ ನಡೆಸಲಿದ್ದೀರಿ. ಶುಭ: 13,19,28. ಅಶುಭ: 11,17,26.





**ಸಿಂಹ:** ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯವನ್ನು ಕಳೆಯಲಿದ್ದೀರಿ. ಸೋದರ– ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಹೆಸರಾಂತ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಪದೋನ್ನತಿ ಸಿಗುವ ಯೋಗ ಇದೆ. ಶುಭ: 18,25,29. ಅಶುಭ: 12,16,26.

**ಕನ್ಯಾ:** ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರು ಕಾಣಿಸಿಕೊಳ್ಳಬಹುದು. ರಾಜಕಾರಣಿಗಳಿಗೆ ದೊಡ್ಡಮಟ್ಟದಲ್ಲಿ ಪ್ರಗತಿ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜತೆಗೆ ಉದ್ವಿಗ್ನ ವಾತಾವರಣ ಇರುತ್ತದೆ. ತಿಂಗಳ ಅಂತ್ಯಕ್ಕೆ ವ್ಯಾಪಾರದಲ್ಲಿ ಪ್ರಗತಿಯನ್ನು ಕಾಣಲಿದ್ದೀರಿ. ಶುಭ: 9,12,22. ಅಶುಭ: 15,20,28.





**ತುಲಾ:** ಉದ್ಯೋಗಿಗಳಿಗೆ ಕೆಲಸದ ಸ್ಥಳ ಬದಲಾವಣೆ ಸಾಧ್ಯತೆ. ತಿಂಗಳ ಉತ್ತರಾರ್ಧದಲ್ಲಿ ಯುವಕರ ಜೀವನದಲ್ಲಿ ಸ್ಥಿರತೆ. ದೊಡ್ಡ ಆರ್ಥಿಕ ವ್ಯವಹಾರ– ವಹಿವಾಟುಗಳು ಪೂರ್ಣಗೊಳ್ಳುವವು. ಮನೆಗೆ ಅಪರೂಪದ ಬಂಧುಗಳ ಆಗಮನ. ಶುಭ: 12,16,22. ಅಶುಭ: 14,18,25.

**ವೃಶ್ಚಿಕ:** ಬರತಕ್ಕ ಬಾಕಿ ಹಣ ಇದ್ದಲ್ಲಿ ಬರುವುದು. ಅರ್ಧದಲ್ಲಿ ನಿಂತ ಕಟ್ಟಡ ಹಾಗೂ ಮನೆ ನಿರ್ಮಾಣ ಕಾರ್ಯಗಳಿದ್ದರೆ ಪೂರ್ಣಗೊಳ್ಳುವುದು. ಚಿಕ್ಕ ಪ್ರವಾಸ. ಆರ್ಥಿಕ ಅನುಕೂಲತೆ. ಉದ್ಯೋಗ ವ್ಯವಹಾರಗಳಲ್ಲಿ ಉತ್ತಮ ಲಾಭ. ಶುಭ: 14,19,29. ಅಶುಭ: 11,16,20.





**ಧನು:** ನಿಮ್ಮ ಬಹುಕಾಲದ ವ್ಯಾಜ್ಯಗಳಿಗೆ ಸೂಕ್ತ ಪರಿಹಾರಗಳು ದೊರಕಲಿವೆ. ಸಿನಿಮಾ, ಸಂಗೀತ, ನಟನೆ, ಸೌಂದರ್ಯ, ಸಾಹಿತ್ಯ, ವೈದ್ಯಕೀಯ, ಬರವಣಿಗೆ, ರಕ್ಷಣೆ ಮತ್ತು ಕಾನೂನು ಈ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವವರ ಪ್ರಗತಿಗೆ ಅತ್ಯುತ್ತಮ ಅವಕಾಶಗಳಿವೆ. ಶುಭ: 10,16,28. ಅಶುಭ: 13,18,26.

**ಮಕರ:** ಪಾಲುದಾರಿಕೆ ಉದ್ಯೋಗದಲ್ಲಿ ತೊಂದರೆ ಭಿನ್ನಾಭಿಪ್ರಾಯ ತಲೆದೋರಬಹುದು. ವಿಚಿತ್ರ ಆರ್ಥಿಕ ಮುಗ್ಗಟ್ಟಿನ ತಿಂಗಳು ಇದು. ಸ್ವತಂತ್ರ ವೃತ್ತಿಪರರಿಗೆ ಉತ್ತಮ ಲಾಭ. ಸರ್ಕಾರಿ ಉದ್ಯೋಗಿಗಳಿಗೆ ಅನಿರೀಕ್ಷಿತ ವರ್ಗಾವಣೆ. ಸೋದರರಿಂದ ಶುಭಸುದ್ದಿ. ಶುಭ: 11,16,24. ಅಶುಭ: 10,14,23.





**ಕುಂಭ:** ಸಮಸ್ಯೆಗಳನ್ನು ಇತರರ ನೆರವಿನಿಂದ ಬಗೆಹರಿಸಿಕೊಳ್ಳಬಹುದು. ವೃತ್ತಿಪರರಿಗೆ ಒತ್ತಡ ಇರಲಿದೆ. ಅನಗತ್ಯ ವಿವಾದಗಳಲ್ಲಿ ನಿಮ್ಮನ್ನು ವಿರೋಧಿಗಳು ಎಳೆಯುವ ಸಾಧ್ಯತೆ ಇದೆ. ಆದರೆ ನಿಮ್ಮ ಜಾಗ್ರತೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಿರಿ. ಶುಭ: 10,18,21. ಅಶುಭ: 12,15,27.

**ಮೀನ:** ದೂರ ಪ್ರದೇಶಗಳಿಗೆ ಪ್ರಯಾಣ ಮಾಡಬೇಕಾಗಬಹುದು. ನಿಮ್ಮ ಪ್ರಯತ್ನಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಗಮನ ನೀಡುತ್ತೀರಿ. ನೀವು ಉದ್ಯೋಗ ಮಾಡುವ ಸ್ಥಳದಲ್ಲಿ ತೆಗೆದುಕೊಂಡ ನಿರ್ಧಾರವೊಂದು ಲಾಭದಾಯಕ ಆಗಲಿದೆ. ಶುಭ: 11,17,24. ಅಶುಭ: 14,19,27.

